ವಿ.ಸಿ. ನಾಲಾ ನವೀಕರಣ

2406 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿ.ಸಿ. ನಾಲಾ ನವೀಕರಣಕ್ಕೆ ತಗಲಿರುವ ಒಟ್ಟು ವೆಚ್ಚ ಎಷ್ಟು?*

ಆ) *ಈ ನವೀಕರಣಕ್ಕೆ ಅಂದಾಜು ಮಾಡಲಾಗಿದ್ದ ವೆಚ್ಚವೆಷ್ಟು?*

ಇ) *ಸದರಿ ಕಾಮಗಾರಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದು ಯಾವ ಗುತ್ತಿಗೆದಾರರ ಕೆಲಸದಲ್ಲಿ ಪತ್ತೆಯಾಗಿದೆ?*

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು)

ಅ) 1997ರ ಜೂನ್ ಅಂತ್ಯದವರೆಗೆ 152.08 ಕೋಟಿ ರೂಪಾಯಿಗಳನ್ನು ಕೃಷ್ಣರಾಜಸಾಗರ ಆಧುನೀಕರಣದ ಕಾಮಗಾರಿಗಳಿಗಾಗಿ ವೆಚ್ಚ ಮಾಡಲಾಗಿದೆ.

ಆ) 1979-80ರಲ್ಲಿ ಕೃಷ್ಣರಾಜಸಾಗರ ಆಧುನೀಕರಣ ಕಾಮಗಾರಿಗಳಿಗಾಗಿ ರೂ. 14.80 ಕೋಟಿಗಳ ಮೂಲ ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗಿತ್ತು. 1985-86ನೇ ಸಾಲಿನ ದರಸೂಚಿಯ ಪ್ರಕಾರ ಕೃಷ್ಣರಾಜಸಾಗರ ಆಧುನೀಕರಣಕ್ಕಾಗಿ 55.00 ಕೋಟಿ ರೂಪಾಯಿಗಳಿಗೆ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿ ಮಂಜೂರು ಮಾಡಲಾಗಿತ್ತು. 1994-95ನೇ ಸಾಲಿನ ದರ -ಸೂಚಿಯ ಪ್ರಕಾರ ಈ ಆಧುನೀಕರಣದ ಅಂದಾಜು ಪಟ್ಟಿಯ ರೂ. 170.00 ಕೋಟಿಗಳಾಗುತ್ತದೆ ಎಂದು ಅಂದಾಜು ಮಾಡಲಾಗಿತ್ತು, ಹಾಗೂ ಈಗ ಈ ಅಂದಾಜು ಪಟ್ಟಿಯ ಮೊತ್ತವು ರೂ.254.93 ಕೋಟಿಗಳಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಇ) ಕಾಮಗಾರಿಗಳ ಗುಣಮಟ್ಟದಲ್ಲಿ ಕಳಪೆಯಾಗಿರುವ ಬಗ್ಗೆ ದೂರುಗಳು ಬಂದಿರುತ್ತವೆ. ಇವುಗಳು ಸಾಮಾನ್ಯ ದೂರುಗಳಾಗಿದ್ದು ಯಾವುದೇ ಗುತ್ತಿಗೆದಾರರ ಕೆಲಸಗಳ ಬಗ್ಗೆ ನಿರ್ದಿಷ್ಟ ದೂರುಗಳಿರುವುದಿಲ್ಲ.

ಸಚಿವ ಸಂಪುಟದ ಸದಸ್ಯರುಗಳ ವಿದೇಶ ಪ್ರವಾಸ

2407 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997ನೇ ಜನವರಿಯಿಂದ ಇಲ್ಲಿಯವರೆಗೆ ಸನ್ಮಾನ್ಯ ಮುಖ್ಯ ಮಂತ್ರಿಗಳೂ ಸೇರಿ ಎಷ್ಟು ಮಂದಿ ಸಚಿವರುಗಳು ವಿದೇಶ ಪ್ರವಾಸ ಕೈಗೊಂಡಿದ್ದರು?*

ಆ) *ಇದಕ್ಕೆ ತಗುಲಿದ ವೆಚ್ಚವೆಷ್ಟು?*

ಇ) *ಯಾವ ಯಾವ ಉದ್ದೇಶಕ್ಕಾಗಿ ವಿದೇಶಿ ಪ್ರವಾಸ ಕೈಗೊಳ್ಳಲಾಯಿತು? (ಪೂರ್ತಿ ವಿವರ ನೀಡುವುದು)*